**An outreach program was carried out under the "Clean and Green is a Perfect Dream" and Book Donation program in Bhimalli Gram panchayat.**

## ಪುಸ್ತಕಗಳೇ ಜೀವನದ ನಿಜವಾದ ಸಂಗಾತಿ



**ಕಲಬುರಗಿ: ಭೀಮಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶರಣಬಸವೇಶ್ವರ ವಿವಿ ಬಿಸಿಎ ಡಿಜಿಟಲ್ ವಿಭಾಗದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪುಸ್ತಕ ಜೋಳಿಗೆ ಕಾರ್ಯಕ್ರಮದಡಿ ಪುಸ್ತಕ ಸಂಗ್ರಹಿಸಿದರು.**

**ಕಲಬುರಗಿ:** ಪುಸ್ತಕಗಳು ಜೀವನದ ನಿಜವಾದ ಸಂಗಾತಿಗಳು. ಆದ್ದರಿಂದ ಜನರ ಜತೆಯಲ್ಲಿ ಬೆರೆತು ಅನುಭವ ಪಡೆಯುವ ಜತೆಯಲ್ಲಿ ಪುಸ್ತಕಗಳನ್ನು ಓದಿ ಜ್ಞಾನ ವಿಸ್ತಾರ ಮಾಡಿಕೊಳ್ಳಬೇಕು ಎಂದು ಉಪನ್ಯಾಸಕಿ ಪರಿಮಳಾ ಎಸ್. ಅರಳಿಮರ ಹೇಳಿದರು.

ಶರಣಬಸವೇಶ್ವರ ವಿವಿಯ ಬಿಸಿಎ ಡಿಜಿಟಲ್ ವಿಭಾಗದ ವಿದ್ಯಾರ್ಥಿಗಳು ತಾಲೂಕಿನ ಭೀಮಳ್ಳಿ ಗ್ರಾಪಂ ಗ್ರಂಥಾಲಯಕ್ಕಾಗಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪುಸ್ತಕ ಜೋಳಿಗೆ ಕಾರ್ಯಕ್ರಮದಡಿ ಪುಸ್ತಕ ಸಂಗ್ರಹ ಮಾಡುವ ಕಾರ್ಯಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿರಿಯರು ದೇಶ ಸುತ್ತಿ ನೋಡು.. ಕೋಶ ಓದಿ ನೋಡು ಎಂದು ಹೇಳಿದ್ದಾರೆ. ಆದ್ದರಿಂದ ಇಂದಿನ ಮಕ್ಕಳು ಹಾಗೂ ಯುವ ಜನತೆಗೆ ಪುಸ್ತಕದ ಕಡೆಗೆ ಒಲುವು ತೋರಬೇಕಿದೆ ಎಂದರು.

ಬಿಸಿಎ ಡಿಜಿಟಲ್ ವಿಭಾಗದ ಮುಖ್ಯಸ್ಥೆ ನಾಗಮ್ಮ ಪಾಟೀಲ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪುಸ್ತಕ ಜೋಳಿಗೆ ಮೂಲಕ ಸಂಗ್ರಹ ಆಗುವ ಪುಸ್ತಕಗಳನ್ನು ನಾವು ಗ್ರಾಪಂ ಗ್ರಂಥಾಲಯಗಳಿಗೆ ನೀಡಿ ಅವುಗಳನ್ನು ಬಲಗೊಳಿಸುವ ಕಾರ್ಯಕ್ರಮ ಮಾಡುತ್ತಿದ್ದೇವೆ. ಇದಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮಕ್ಕಳು ಮತ್ತು ಸಾರ್ವಜನಿಕ ಪುಸ್ತಕ ನೀಡಿದ್ದಾರೆ ಎಂದರು. ಈ ವೇಳೆ ಶಿಲ್ಪಾ ಪಾಟೀಲ, ಗ್ರಾಪಂ ಪಿಡಿಒ ಭಾರತಿ ಮಣ್ಣೂರೆ, ಕಾರ್ಯದರ್ಶಿ, ಗ್ರಾಪಂ ಸದಸ್ಯರು, ಶಾಲೆ ಮುಖ್ಯ ಗುರುಗಳು ಮತ್ತು ವಿದ್ಯಾರ್ಥಿಗಳು ಇದ್ದರು.

## ಶರಣಬಸವ ವಿ.ವಿ.: ಬಿಸಿಎ ವಿದ್ಯಾರ್ಥಿನಿಯರಿಂದ ಪುಸ್ತಕ ದೇಣಿಗೆ



**ಕಲಬುರಗಿ: ಶರಣಬಸವ ವಿಶ್ವವಿದ್ಯಾಲಯದ ಬಿಸಿಎ (ಮಹಿಳಾ) ವಿಭಾಗದ ಬೋಧಕರು ಹಾಗೂ ವಿದ್ಯಾರ್ಥಿನಿಯರು ಭೀಮಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಗಿಡಗಳನ್ನು ನೀಡಿ ಸ್ವಚ್ಛತೆ ಬಗ್ಗೆ ತಿಳವಳಿಕೆ ನೀಡಿದರು.**

ಕಲಬುರಗಿ "ಪುಸ್ತಕ ಜೋಳಿಗೆ" ಕಾರ್ಯಕ್ರಮದಡಿ ನಗರದ ಶರಣಬಸವ ವಿಶ್ವವಿದ್ಯಾಲಯದ ಕಂಪ್ಯೂಟರ್ ಅಪ್ಲಿಕೇಶನ್ (ಬಿಸಿಎ) ವಿಭಾಗದ (ಮಹಿಳಾ) ಬೋಧಕ ವರ್ಗದವರು ಹಾಗೂ ವಿದ್ಯಾರ್ಥಿನಿಯರು ಕಲಬುರಗಿ ತಾಲೂಕಿನ ಭೀಮಳ್ಳಿ ಗ್ರಾಮ ಪಂಚಾಯತಿಯ ಡಿಜಿಟಲ್ ಗ್ರಂಥಾಲಯಕ್ಕೆ ತಮ್ಮಲ್ಲಿನ ಪುಸ್ತಕಗಳನ್ನು ನೀಡಿದರು.ನಂತರ ಭೀಮಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಶಾಲಾ ಮಕ್ಕಳಿಗೆ ಸ್ವಚ್ಛತೆ ಹಾಗೂ ಗಿಡ-ಮರಗಳನ್ನು ಉಳಿಸುವ ಬಗ್ಗೆ ತಿಳಿವಳಿಕೆ ನೀಡಿದರು.

ಬಿಸಿಎ (ಮಹಿಳಾ) ವಿಭಾಗದ ಮುಖ್ಯಸ್ಥರಾದ ಶ್ರೀಮತಿ ನಾಗಮ್ಮ ಪಾಟೀಲ, ಉಪನ್ಯಾಸಕರಾದ ಶ್ರೀಮತಿ ಪರಿಮಳಾ ಅರಳಿಮರ, ಶಿಲ್ಪಾ ಪಾಟೀಲ ಹಾಗೂ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಭಾರತಿ ಮಣ್ಣೂರೆ, ಗ್ರಾಮ ಪಂಚಾಯತ ಕಾರ್ಯದರ್ಶಿ, ಸದಸ್ಯರು ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರುಗಳು ಉಪಸ್ಥಿತರಿದ್ದರು.

*samyukta Karnataka*

On 31st DEC 2024 Our department along with staff and students actively participated in book donation by donating various books to Government Higher Primary School in Gogi (K) village and **distributed books to the school children**. Gram Panchayat of Jeevangi **initiative called "Pustaka Goodu"** and **donated around 170 useful books** as part of the activity.



## ಫುಡ್ ಮತ್ತು ಅನ್ ಹೆಲ್ದಿ ಫುಡ್ ಕಾರ್ಯಕ್ರಮ

**ಉದಯಕಾಲ ನ್ಯೂಸ್**

**ಕಲಬುರಗಿ:** ಕಮಲಾಪುರ ತಾಲೂಕಿನ ಜೀವಣಗಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಕಲಬುರಗಿಯ ಶ್ರೀ ಶರಣ ಬಸವೇಶ್ವರ ಕಾಲೇಜಿನ ಬಿ.ಸಿ.ಎ (ವುಮೆನ್ಸ್) ವಿದ್ಯಾರ್ಥಿನಿಯರು ಹಾಗೂ ಶಿಕ್ಷಕರು ಆಗಮಿಸಿ ''ಹೆಲ್ದಿ ಫುಡ್ ಮತ್ತು ಅನ್ ಹೆಲ್ದಿ ಫುಡ್'' ಬಗ್ಗೆ ಔಟ್ರಿಚ ಕಾರ್ಯಕ್ರಮ ಆಯೋಜಿಸಿಲಾಗಿತ್ತು.

ನಂತರ ಜೀವಣಗಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗೋಗಿ(ಕೆ) ಗ್ರಾಮದ ಸ.ಹಿ.ಪ್ರಾ. ಶಾಲೆಗೆ ಆಗಮಿಸಿ ಮಕ್ಕಳಿಗೆ ಪೆನ್ಸಿಲ್ ಗಳನ್ನು ವಿತರಿಸಿದರು ಹಾಗೂ ನೂತನವಾಗಿ ಪ್ರಾರಂಭಿಸಲಾದ''ಪುಸ್ತಕ ಗೂಡಿಗೆ'' ಸುಮಾರು 170 ಕ್ಕೂ ಹೆಚ್ಚು ಪುಸ್ತಕಗಳನ್ನು ಕಾಣಿಕೆಯಾಗಿ ನೀಡಿದರು.

ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಹಾನಂದ ,ಸ.ಹಿ.ಪ್ರಾ.ಶಾಲೆ ಗೋಗಿ (ಕೆ)ಯ ಮುಖ್ಯಗುರುಗಳು,ಕಾಲೇಜಿನ ಚೇರಪರ್ಸನ್ ನಾಗಮ್ಮ ,ಸಹಾಯಕ ಪ್ರಾಧ್ಯಾಪಕರಾದ ಪರಿಮಳ, ಶಿಲ್ಪಾ ಪಾಟೀಲ ಹಾಗೂ ಕಾಲೇಜಿನ ವಿದ್ಯಾರ್ಥಿನಿಯರು, ಶಾಲಾ ಮಕ್ಕಳು ಉಪಸ್ಥಿತರಿದ್ದರು.